'ನನ್ನಿಂದ ತಪ್ಪಾಯ್ತು. ನನ್ನನ್ನು ಕ್ಷಮಿಸಿರಿ. ಇರ್ನೆ ನನಗೆ ಮೋಸ ಮಾಡಿದಳು. ಆ ಕಾರಣಕ್ಕಾಗಿಯೇ ನಾನು ಅದನ್ನು ತಿಂದೆ. ಇನ್ನು ಮುಂದೆ ನಾನೆಂದೂ ಗೋಮಾಂಸವನ್ನು ತಿನ್ನುವುದಿಲ್ಲ. ಅಷ್ಟೇ ಅಲ್ಲ, ನಾನು ಇರ್ನೆಯ ಜೊತೆಗಿನ ಸಂಬಂಧವನ್ನೇ ಮುರಿದುಕೊಳ್ಳುತ್ತೇನೆ. ಅವಳೊಂದಿಗೆ ಇನ್ನೆಂದಿಗೂ ನಾನು ಮತ್ತೆ ಮಾತಾಡುವುದಿಲ್ಲ... ಮಾತಾಡುವುದಿಲ್ಲ...' ಎಂದು ಅಂಗಲಾಚುತ್ತಿದ್ದಳು. ಅವಳು ಒಳಗಡೆ ಹೀಗೆ ರೋಧಿಸುತ್ತಿರುವಾಗಲೇ ಹೊರಗಡೆ ಸಿಡಿಲು ಮಿಂಚು ಠಳಾಯಿಸುತ್ತಿದ್ದವು. ಅವುಗಳ ಅಬ್ಬರದಲ್ಲಿ ಇರ್ನೆಯ ಕಣ್ಣು ಮಂಜಾದವು, ಕಿವಿ ಕೇಳಿಸದಂತಾದವು. 'ಅಯ್ಯೋ ಆ ಸಿಡಿಲು ಎಲ್ಲಿ ಬಿತ್ತೋ... ಅದೇನಾದರೂ ಶರ್ಮಿಳಾಳ ಮೇಲೆಯೇ ಬಿದ್ದಿತೋ....ಈಗ ಶರ್ಮಿಳಾ ಎಲ್ಲಿದ್ದಾಳೋ!!...' ಒಮ್ಮೆಲೇ ಬೆಚ್ಚಿ ಎಚ್ಚರಾದ ಇರ್ನೆಯ ಮೈತುಂಬ ಬೆವರು ಹರಿಯುತ್ತಿತ್ತು.

ಇರ್ನೆಯ ಮನಸ್ಸಿನಲ್ಲಿದ್ದ ಬಿರುಗಾಳಿ ಇನ್ನೂ ಜೋರಾಗಿಯೇ ಬೀಸುತ್ತಿತ್ತು. ಬಹುಶಃ ಅವಳ ತಂದೆತಾಯಿ ಆ ವಿಷಯವನ್ನೇ ಮರೆತಂತಿದ್ದರು. ಅವಳೂ ಏನೂ ನಡೆದೇ ಇಲ್ಲವೆಂಬಂತೆ ಇರಲು ನಿರ್ಧರಿಸಿದಳು. ನಿನ್ನೆ ವನಭೋಜನಕ್ಕೆಂದು ಕರೆದುಕೊಂಡು ಹೋದ ಕಾರಣಕ್ಕಾಗಿ ಇವತ್ತು ಶಾಲೆಯವರು ರಜೆ ಘೋಷಿಸಿದ್ದರು. ನಾಳೆಯಂತೂ ರವಿವಾರ. 'ಇನ್ನು ಸೋಮವಾರವೇ ಶರ್ಮಿಳಾಳ ಭಟ್ಟಿಯಾಗುವುದು...' ಹೀಗೆ ಯೋಚಿಸುತ್ತಿರುವಾಗಲೇ ಅವಳ ಕೈಯಲ್ಲಿದ್ದ ಮೊಬೈಲ್ ರಿಂಗಣಿಸತೊಡಗಿತು. ಅದರ ಶಬ್ದ ಕೇಳಿದ ತಕ್ಷಣ ಆ ಕರೆ ಯಾರದಿರಬಹುದೆಂದು ಗೊತ್ತಾಗಿ ಇರ್ನೆಗೆ ಆ ಫೋನನ್ನು ತೆಗೆದುಕೊಳ್ಳುವ ಧೈರ್ಯ ಬರಲಿಲ್ಲ. ಅದು ಹಾಗೇ ಬಾರಿಸುತ್ತಲೇ ಇತ್ತು. ಅವಳ ಹೃದಯ ಡಬ್ ಡಬ್ ಎಂದು ಹೊಡೆದುಕೊಳ್ಳತೊಡಗಿತು. ಜೊತೆಗೆ ಎದೆ ಕಂಪಿಸತೊಡಗಿತು.

"ನಿನ್ನ ಫೋನ್ ಹೊಡೆದುಕೊಳ್ಳುತ್ತಿದೆ... ಅದನ್ನು ತೊಗೋ..." ತಾಯಿ, ಇರ್ನೆಗೆ ಕೂಗಿ ಹೇಳಿದಳು. ಆದರೆ ಇರ್ನೆ ಆ ಫೋನ್ ಕರೆಯನ್ನು ಕಟ್ ಮಾಡಿಬಿಟ್ಟಳು. ಹಾಗೆ ಕಟ್ ಮಾಡಿ ಒಂದು ನಿಟ್ಟುಸಿರು ಬಿಡಬೇಕೆನ್ನುವಷ್ಟರಲ್ಲಿಯೇ ಮತ್ತೆ ಫೋನ್ ಬಾರಿಸತೊಡಗಿತು. ಈ ಸಲ ತಾಯಿ ಕೂಗಿ ಹೇಳುವ ಮೊದಲೇ ಇರ್ನೆ ಫೋನ್ ಕಟ್ ಮಾಡಿದಳಷ್ಟೇ ಅಲ್ಲ, ಅದನ್ನು ಸ್ವಿಚ್ ಆಫ್ ಕೂಡ ಮಾಡಿಬಿಟ್ಟಳು. ಇಂಥ ಹೊತ್ತಲ್ಲಿ ಶರ್ಮಿಳಾಳನ್ನು ಬಿಟ್ಟು ಅವಳಿಗೆ ಇನ್ನಾರು ಫೋನ್ ಮಾಡಲು ಸಾಧ್ಯ?

ಮುಂಜಾನೆಯ ಉಪಹಾರದಲ್ಲಿ ಇರ್ನೆ ಬರ್ಗರನ್ನು ತುಂಬ ಇಷ್ಟಪಡುತ್ತಿದ್ದಳಾದ ಕಾರಣ ಅವಳ ತಾಯಿ ನಿನ್ನೆ ಮಾಡಿ ಉಳಿದಿದ್ದ ಬರ್ಗರನ್ನೇ ಓವನ್‌ನಲ್ಲಿಟ್ಟು ಬಿಸಿ ಮಾಡಿ ಅವಳಿಗೆ ತಿನ್ನಲು ಕೊಟ್ಟಳು. ಅವುಗಳತ್ತ ದೃಷ್ಟಿಯನ್ನೂ ಕೂಡ ಹರಿಸದ ಇರ್ನೆ ಬರ್ಗರ್‌ಗಳ ಆ ಪ್ಲೇಟನ್ನೇ ದೂರ ತಳ್ಳಿ, ಟೇಬಲ್ ಮೇಲೆ ಇಟ್ಟಿದ್ದ ಬ್ರೆಡ್ಡಿನಲ್ಲಿ ಒಂದು ತುಂಡನ್ನು ತೆಗೆದುಕೊಂಡು ಚಹಾದಲ್ಲಿ ಅದ್ದಿ ಅದನ್ನೇ ಬಾಯಾಡಿಸತೊಡಗಿದಳು. ತಾಯಿ ಇದನ್ನೆಲ್ಲ ಗಮನಿಸುವ ಮೊದಲೇ ಒಂದೇ ಗುಟುಕಿನಲ್ಲಿ ಚಹಾ ಕುಡಿದು ಪುಸ್ತಕವನ್ನೋದುತ್ತ ಕುಳಿತುಬಿಟ್ಟಳು.

ಶರ್ಮಿಳಾಳಿಂದ ಓದಲು ಪಡೆದಿದ್ದ ಪುಸ್ತಕವನ್ನು ಇರ್ನೆ ಅವಳಿಗೆ ಹಿಂದಿರುಗಿಸಬೇಕಾಗಿತ್ತು. 'ಈಗ ಶರ್ಮಿಳಾ ತನ್ನ ಜೊತೆ ಮಾತಾಡುವಳೆ?' ಎಂಬುದೇ ಇರ್ನೆಗೆ ದೊಡ್ಡ ಚಿಂತೆಯಾಗಿತ್ತು. 'ಅವಳು ಮಾತಾಡದಿದ್ದರೆ ಆಕೆಗೆ ಪುಸ್ತಕವನ್ನು ಹಿಂದಿರುಗಿಸುವುದು ಹೇಗೆ? ಏನೇ ಇರಲಿ, ಪುಸ್ತಕ ಹಿಂದಿರುಗಿಸುವ ನೆವವಾದರೂ ತಾವಿಬ್ಬರೂ ಮತ್ತೆ ಮಾತನಾಡುವ ಅವಕಾಶವನ್ನು ತಂದುಕೊಡಬಹುದು. ಹಾಗೆ ಅವಳು ನನ್ನೊಂದಿಗೆ ಮಾತನಾಡಿದರೆ ನಾನು ಅವಳಲ್ಲಿ ಖಂಡಿತ